ಇ) ರಾಯಚೂರು, ದೇವದರ್ಗು ಮಾನವಿ, ಲಿಂಗಸೂಗೂರು, ಸಿಂಧರುತಳಿಗೆ ಸಮಾನವಾಗಿ ನೀಡಲಾಗಿದೆ.

2007–08	20,91,000.00
2008–09	35,40,900.00
2009–10	1,09,20,000.00

ಈ) ಸ್ಥಳೀಯ ಪ್ರಯೋಜನೆ
ಸಾಂಸ್ಕೃತಿಕ ಸೌರಭ
ಯುವ ಸೌರಭ
ಚಿಗುರು
ರಸಗ್ರಹಣ
ಸಂಘ ಸಂಸ್ಥೆ ಧನಸಹಾಯ
ಗಡಿ ತಾಲ್ಲೂಕು ಪ್ರದೇಶಗಳಲ್ಲಿ ಕನ್ನಡ ಜಾಗೃತಿ
ಗಡಿ ಉತ್ಸವ
ಕನಕ ಜಯಂತಿ
ಗುರುಶಿಷ್ಯ ಪರಂಪರೆ
ವಿಫಯೋ (ಪ.ಜಾ)
ಗಿರಿಜನ ಉಪ ಯೋಜನೆ (ಪ.ಪಂ)

ತುಂಗಭದ್ರ ಎಡದಂಡೆ ನಾಲೆಯ ಉಪಕಾಲುವೆಗಳು

340 (415) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ನಾಲೆಯ 36 ಹಾಗೂ 54ರ ಉಪ ಕಾಲುವೆಗಳ ಕಾಮಗಾರಿಯು ಕಳಪೆ ಗುಣಮಟ್ಟದಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಳಪೆ ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರು ಯಾರು; (ಹೆಸರು ಮತ್ತು ವಿಳಾಸವನ್ನೊಳಗೊಂಡ ಪೂರ್ಣ ಮಾಹಿತಿಯನ್ನು ನೀಡುವುದು)

ಇ) ಈ ಕಳಪೆ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರು ಮತ್ತು ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆಯೇ;

ಈ) ಹಾಗಿದ್ದಲ್ಲಿ, ತಪ್ಪಿತಸ್ಥ ಗುತ್ತಿಗೆದಾರರ ಹಾಗೂ ಅಧಿಕಾರಿಗಳ ಮೇಲೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ; (ವಿವರಗಳನ್ನು ನೀಡುವುದು)

ಉ) ಈ ತಪ್ಪಿತಸ್ಥ ಗುತ್ತಿಗೆದಾರರನ್ನು ಸರ್ಕಾರವು ಕಪ್ಪುಪಟ್ಟಿಗೆ ಸೇರಿಸಲಾಗುವುದೇ; ಹಾಗಿದ್ದಲ್ಲಿ, ಯಾವಾಗ ಕಪ್ಪು ಪಟ್ಟಿಗೆ ಸೇರಿಸಲಾಗುವುದು;

ಊ) ಈ ಕಳಪೆ ಕಾಮಗಾರಿಯನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) 2009–10ನೇ ಸಾಲಿನ ಕ್ಲೋಜರ್ ಅವಧಿಯಲ್ಲಿ ಕೈಗೊಂಡ ತುಂಗಭದ್ರಾ ಎಡದಂಡೆ ನಾಲೆಯ ವಿತರಣಾ ಕಾಲುವೆ 36 ಹಾಗೂ 54ರ ಎರಡು ವಿತರಣಾ ಕಾಲುವೆ ಲೈನಿಂಗ್ ಕಾಮಗಾರಿಗಳಲ್ಲಿ ಸ್ಥಳೀಯ ಜನರು ಹಾಗೂ ಜಾನುವಾರುಗಳು ನೀರಿಗಾಗಿ ಹತ್ತಿ ಇಳಿಯುವಾಗ ಕಾಲುವೆಯ ಮೇಲ್ಭಾಗದಲ್ಲಿ (ಲೈನಿಂಗ್ ಜಾಗದಲ್ಲಿ) ಅಲ್ಲಲ್ಲಿ ಲೈನಿಂಗ್ ಕಾಂಕ್ರೀಟ್ ಒಡೆದು ಹಾಳಾಗಿದ್ದು ಇದನ್ನು ಕೂಡಲೇ ಸರಿಪಡಿಸಲಾಗಿದೆ. ಹಾಗೂ ಸೂಕ್ತ ಸ್ಥಳಗಳಲ್ಲಿ ಇನ್–ಲೆಟ್‌ಗಳನ್ನು ಅಳವಡಿಸಿ ಮಳೆ ನೀರಿನಿಂದ ಕಾಲುವೆಗೆ ಧಕ್ಕೆ ಉಂಟಾಗದಂತೆ ಕ್ರಮಕೈಗೊಳ್ಳಲಾಗಿದೆ.

ಆ) ಕಾರ್ಯಪಾಲಕ ಅಭಿಯಂತರರು, ಗುಣನಿಯಂತ್ರಣ ವಿಭಾಗ, ಮುನಿರಾಬಾದ್, ಇವರು 2009–10ನೇ ಸಾಲಿನಲ್ಲಿ ಕೈಗೊಂಡ ಎರಡು ವಿತರಣಾ ಕಾಲುವೆಗಳನ್ನು ಪರಿವೀಕ್ಷಣೆ ಮಾಡಿದ್ದು, ಕಾಲುವೆಯ ಪಕ್ಕದಲ್ಲಿ ವಾಸಿಸುತ್ತಿರುವ ಜನ ಜಾನುವಾರುಗಳು ನೀರಿಗಾಗಿ ಕಾಲುವೆಯಲ್ಲಿ ಇಳಿಯುವ ಸಲುವಾಗಿ ಜನರಿಂದ ಅಲ್ಲಲ್ಲಿ ಕಾಂಕ್ರೀಟ್ ಕಿತ್ತು ಬಂದಿದ್ದು ಇದನ್ನು ಸರಿಪಡಿಸಲಾಗಿದೆ.

2009–10ನೇ ಸಾಲಿನಲ್ಲಿ ವಿತರಣಾ ಕಾಲುವೆ 36 ಕಿ.ಮಿ.0.00 ರಿಂದ 6.15ರವರೆಗೆ ಶ್ರೀ ಕರಿಯಪ್ಪ ಡಿ. ಚನ್ನೂರು, ಪ್ರಥಮ ದರ್ಜೆ ಗುತ್ತಿಗೆದಾರರು ಸಾ: ವಜ್ಜಲ್, ತಾ: ಸುರಪುರ ಜಿ: ಯಾದಗಿರಿ ಇವರಿಗೆ ವಹಿಸಿಕೊಡಲಾಗಿದೆ.

2010–11ನೇ ಸಾಲಿನಲ್ಲಿ ಕಿ.ಮಿ. 6.15 ರಿಂದ 11.00ರವರೆಗೆ ಶ್ರೀ ಎಂ.ವೈ, ಕಟ್ಟಿಮನಿ ಪ್ರಥಮ ದರ್ಜೆ ಗುತ್ತಿಗೆದಾರರು, 148/6–1, ಐದನೇ ಕ್ರಾಸ್ ಆರ್.ಎಂ.ವಿ. ಎಕ್ಸ್‌ಟೆನ್‌ಷನ್ ಸದಾಶಿವನಗರ ಬೆಂಗಳೂರು–80 ಇವರಿಗೆ ವಹಿಸಿಕೊಡಲಾಗಿದೆ.

ವಿತರಣಾ ಕಾಲುವೆ 54ರಲ್ಲಿ 2009–10ರ ಸಾಲಿನಲ್ಲಿ ಕಿ.ಮಿ. 0.0 ರಿಂದ 8.85ರವರೆಗಿನ ಕಾಮಗಾರಿಯನ್ನು ಶ್ರೀ ನಾಗಪ್ಪ ಡಿ. ವಡ್ಡರ ಪ್ರಥಮ ದರ್ಜೆ ಗುತ್ತಿಗೆದಾರರು ಸಾ: ವಜ್ಜಲ್ ತಾ: ಸುರಪುರ ಜಿ: ಯಾದಗಿರಿ ಇವರಿಗೆ ವಹಿಸಿಕೊಡಲಾಗಿರುತ್ತದೆ.

2010–11ನೇ ಸಾಲಿನಲ್ಲಿ ಕಿ.ಮಿ. 8.85 ರಿಂದ 13.00ರವರೆಗಿನ ಕಾಮಗಾರಿಯನ್ನು ಶ್ರೀ ಎಂ.ವೈ. ಕಟ್ಟಿಮನಿ ಪ್ರಥಮ ದರ್ಜೆ ಗುತ್ತಿಗೆದಾರರು, 148/6–1, ಐದನೇ ಕ್ರಾಸ್ ಆರ್.ಎಂ.ವಿ. ಎಕ್ಸ್‌ಟೆನ್‌ಷನ್, ಸದಾಶಿವನಗರ ಬೆಂಗಳೂರು–80 ಇವರಿಗೆ ವಹಿಸಿಕೊಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಕೃಷಿ ಭೂಮಿಗೆ ಶಾಶ್ವತ ನೀರಾವರಿ

341 (668) ಶ್ರೀ ನರಸಿಂಹಸ್ವಾಮಿ .ಜೆ (ದೊಡ್ಡಬಳ್ಳಾಪುರ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ಕೃಷಿ ಭೂಮಿಗೆ ನೀರುಣಿಸಲು ನೀರಾವರಿ ಯೋಜನೆಗಳ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮೇಲ್ಕಂಡ ಕೃಷಿ ಭೂಮಿಗೆ ನೀರಾವರಿ ಯೋಜನೆ ಕಲ್ಪಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕೃಷಿ ಭೂಮಿಗೆ ನೀರಾವರಿ ಕಲ್ಪಿಸಲು ಹಾಲಿ ಇರುವ ಕೆರೆಗಳ ದುರಸ್ತಿ, ಜೀರ್ಣೋದ್ಧಾರ ಹಾಗೂ ಪುನರುಜ್ಜೀವನ ಮತ್ತು ನಬಾರ್ಡ್ ಸಾಲದೊಂದಿಗೆ ಹಂತ ಹಂತವಾಗಿ ಕೆರೆಯ ಅಂಗಳದಲ್ಲಿ ಮತ್ತು ಪೋಷಕ ಕಾಲುವೆಗಳ ಹೂಳೆತ್ತುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಹೊಸ ನೀರಾವರಿ ಕ್ಷೇತ್ರವನ್ನು ವಿಶೇಷ ಘಟಕ ಯೋಜನೆ–ಗಿರಿಜನ ಉಪ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುತ್ತಿದೆ.